# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1402** |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ರಾಜ್ಯದಲ್ಲಿ ವಿದ್ಯುತ್ ವಿತರಣಾ ಸಂಸ್ಥೆಗಳಾದ BESCOM, HESCoM, GESCOM, MESCOM, CESC ಸಂಸ್ಥೆಗಳಿಂದ ಕಳೆದ ಮೂರು ವರ್ಷಗಳಲ್ಲಿ ಗಳಿಸಿರುವ ಆದಾಯವೆಷ್ಟು ಮತ್ತು ನಷ್ಟವೆಷ್ಟು;</td>
<td>
ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ಆದಾಯ ಮತ್ತು ನಷ್ಟದ ವಿವರಗಳು ಈ ಕೆಳಕಂಡಂತಿದೆ.<br><br>
ಲಾಭ (+)/ ನಷ್ಟ (-) (ರೂ. ಕೋಟಿಗಳಲ್ಲಿ)
<table>
<tr><th></th><th colspan="2">2022-23</th><th colspan="2">2023-24</th><th colspan="2">2024-25</th></tr>
<tr><th>ವಿಸಕಂಪನಿ</th><th>ಆದಾಯ</th><th>ಲಾಭ/ ನಷ್ಟ</th><th>ಆದಾಯ</th><th>ಲಾಭ/ ನಷ್ಟ</th><th>ಆದಾಯ</th><th>ಲಾಭ/ ನಷ್ಟ</th></tr>
<tr><td>ಬೆವಿಕಂ</td><td>27508.67</td><td>-1767.50</td><td>34035.38</td><td>-3863.16</td><td>33048.24</td><td>-5476.14</td></tr>
<tr><td>ಮವಿಕಂ</td><td>4741.23</td><td>51.85</td><td>6313.89</td><td>-203.78</td><td>6240.70</td><td>-96.35</td></tr>
<tr><td>ಹುವಿಕಂ</td><td>11220.13</td><td>-836.23</td><td>14111.30</td><td>-2640.20</td><td>12779.29</td><td>-1499.72</td></tr>
<tr><td>ಗುವಿಕಂ</td><td>7539.64</td><td>-296.21</td><td>8836.16</td><td>-1496.62</td><td>8344.04</td><td>-766.49</td></tr>
<tr><td>ಚಾವಿಸನಿನಿ</td><td>5858.23</td><td>-297.65</td><td>8094.84</td><td>-346.63</td><td>7950.79</td><td>-1031.15</td></tr>
</table>
ವಿದ್ಯುತ್ ಸರಬರಾಜು ಕಂಪನಿಗಳು ಹಿಂದಿನ ವರ್ಷಗಳಲ್ಲಿ ನಷ್ಟ ಅನುಭವಿಸಲು ಕಾರಣಗಳು
<ul>
<li>ವರ್ಷವಾರು ವಿದ್ಯುತ್ ಬೇಡಿಕೆಗನುಸಾರವಾಗಿ ಇತರೆ ಮೂಲಗಳಿಂದ ವಿದ್ಯುತ್ ಖರೀದಿ ಗಣನೀಯ ಹೆಚ್ಚಳದಿಂದಾಗಿ ಕಂಪನಿಗಳ ವಿದ್ಯುತ್ ಮಾರಾಟ ಆದಾಯ ಮತ್ತು ವಿದ್ಯುತ್ ಖರೀದಿ ವೆಚ್ಚಗಳ ನಡುವೆ ಅಂತರ ಹೆಚ್ಚಳ.</li>
<li>ಕವಿನಿ ಆಯೋಗದ ಅನುಮೋದಿತ ದರಗಳಂತೆ ಕಂದಾಯ ಆದಾಯವನ್ನು ಗಳಿಸಲಾಗಿರುವುದಿಲ್ಲ.</li>
<li>ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ನಡುವಿನ 2005-06 ರಿಂದ 2019-20 ರವರೆಗಿನ ಸಂಬಂಧಿಸಿದ ವರ್ಷಗಳ ಲೆಕ್ಕಗಳಲ್ಲಿ ಪರಿಗಣಿಸದ ವಿದ್ಯುತ್ ಖರೀದಿ ವೆಚ್ಚದ ಬಗ್ಗೆ ಲೆಕ್ಕಪರಿಶೋಧಕರ ವರದಿಯನ್ವಯ ಸಮನ್ವಯ ಮತ್ತು ಲೆಕ್ಕೀಕರಣ (ಸುಮಾರು 7,900 ಕೋಟಿ).</li>
</ul>
</td>
</tr>
</table>

| | | |
|---|---|---|
| ಆ) | ರಾಜ್ಯದಲ್ಲಿ ಘೋಷಿಸಿರುವ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಜ್ಯೋತಿ ಅನುಷ್ಠಾನದ ನಂತರ ಈ ಮೇಲ್ಕಂಡ ವಿದ್ಯುತ್ ಸರಬರಾಜು ಕಂಪನಿಗಳ ಮೇಲೆ ಬಿದ್ದ ಆರ್ಥಿಕ ಹೊರೆ ಎಷ್ಟು | ಗೃಹ ಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಸರಬರಾಜುವಿಗಾಗಿ ಸರ್ಕಾರದ ವತಿಯಿಂದ ಸಹಾಯಧನವನ್ನು ಮಾಹೆಯಾನ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆಗೊಳಿಸಲಾಗುತ್ತಿದ್ದು, ಸದರಿ ಪ್ರಕ್ರಿಯೆಯಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ. |

(ಕೆ.ಜೆ. ಜಾರ್ಜ್)
ಇಂಧನ ಸಚಿವರು